# ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

ಶ್ರೀ ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ - 563 103.

ಸಂಖ್ಯೆ: ಬೆಂ.ಉ.ವಿ.ವಿ/ಬಿ.ಎಡ್ ಕಾಲೇಜು/ NCTE Complaint/ 2019-20 ದಿನಾಂಕ: 16.12.2019

**ವಿಷಯ: ದಕ್ಷಿಣ ಭಾರತ ರಾಜ್ಯಗಳ ಬಿಎಡ್ ಕಾಲೇಜುಗಳು SRC/NCTEಯಿಂದ ಅನುಮೋದನೆ, ಹೆಚ್ಚುವರಿ ಪ್ರವೇಶಾತಿ ಸಂಬಂಧ ಅರ್ಜಿ ಮತ್ತು ಪ್ರಸ್ತಾವನೆಗಳಲ್ಲಿ Fraud ಸಹಿ ಮಾಡಿ ಸಲ್ಲಿಸುತ್ತಿರುವ ಬಗ್ಗೆ ಬಂದಿರುವ ದೂರು.**

**ಉಲ್ಲೇಖ: 1.F.No.SRO/NCTE/Complaint/2019/110455 date: 11.10.2019.**
**2. ದಿನಾಂಕ 13.12.2019ರಂದು ನಡೆದ ಸಿಂಡಿಕೇಟ್ ಸಭೆಯ ತೀರ್ಮಾನ.**
**3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 16.12.2019.**

* * *

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ, ದಕ್ಷಿಣಭಾರತ ವ್ಯಾಪ್ತಿಯ ಕೆಲವು ಬಿಎಡ್ ಕಾಲೇಜುಗಳು NCTE ಅನುಮೋದನೆ, ಹೆಚ್ಚುವರಿ ಪ್ರವೇಶಾತಿ, ಕಾಲೇಜು ವಿಳಾಸ ಬದಲಾವಣೆ/ ಸ್ಥಳ ಬದಲಾವಣೆ ಇತ್ಯಾದಿಗಳ ಸಂಬಂಧ ಪ್ರಸ್ತಾವನೆಗಳನ್ನು ಸಲ್ಲಿಸುವಾಗ fake ಸಹಿಗಳನ್ನು ಮಾಡಿ ಅನಧಿಕೃತ ದಾಖಲೆಗಳನ್ನು ಸಲ್ಲಿಸುತ್ತಿರುವುದು ತಮ್ಮ ಗಮನಕ್ಕೆ ಬಂದಿರುವುದಾಗಿ ಪ್ರಾಂತೀಯ ನಿರ್ದೇಶಕರು, NCTE, ನವದೆಹಲಿ ಇವರು ತಮ್ಮ ಪತ್ರದ (ಉಲ್ಲೇಖ-1) ಮೂಲಕ ತಿಳಿಸಿರುತ್ತಾರೆ. ಈ ರೀತಿ ಕಾಲೇಜುಗಳು fake ಸಹಿ/ದಾಖಲೆ ಮೂಲಕ ಪ್ರಸ್ತಾವನೆ ಸಲ್ಲಿಸುತ್ತಿರುವುದು ಕಂಡುಬಂದರೆ ಅಂತಹ ಕಾಲೇಜುಗಳ ಮೇಲೆ ವಿಶ್ವವಿದ್ಯಾಲಯವು ಕಾನೂನು ರೀತಿ FIR ದಾಖಲಿಸಿ ಅದರ ದಾಖಲೆ ಪ್ರತಿಯನ್ನು NCTE ಕಛೇರಿ, ನವದೆಹಲಿ ಇಲ್ಲಿಗೆ ನೀಡುವಂತೆ ಕೋರಿದ್ದು, ಸದರಿ ವಿಷಯವನ್ನು ಅತಿ ತುರ್ತು ಎಂದು ಪರಿಗಣಿಸಲು ಸಹ ತಿಳಿಸಿರುತ್ತಾರೆ.

ದಿನಾಂಕ 13.12.2019ರಂದು ನಡೆದ ಸಿಂಡಿಕೇಟ್ ಸಭೆಯು ಸದರಿ ವಿಚಾರವನ್ನು ಚರ್ಚಿಸಿ, ಈ ವಿಚಾರವನ್ನು ವಿಶ್ವವಿದ್ಯಾಲಯವು ಗಂಭೀರವಾಗಿ ಪರಿಗಣಿಸಬೇಕೆಂದು ಸೂಚಿಸಿದೆ.

ಈ ಹಿನ್ನಲೆಯಲ್ಲಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವ್ಯಾಪ್ತಿಯ ಯಾವುದೇ ಬಿಎಡ್ ಕಾಲೇಜುಗಳು ಮುಂದಿನ ದಿನಗಳಲ್ಲಿ ತಪ್ಪು ದಾಖಲೆ, ತಪ್ಪು ಸಹಿ (Fraud ಸಹಿ) ಮಾಡಿ ದೃಢೀಕರಿಸಿ NCTEಗೆ ನೀಡುವುದು ಮತ್ತು ಈಗಾಗಲೇ ನೀಡಿರುವುದು ಕಂಡುಬಂದರೆ, ವಿಶ್ವವಿದ್ಯಾಲಯವು ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಅಂತಹ ಕಾಲೇಜುಗಳ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. NCTE ಆದೇಶದಂತೆ FIR ಮೊಕದ್ದಮೆಯನ್ನು ದಾಖಲಿಸಿ ಕಾನೂನು ರೀತಿ ಶಿಸ್ತಿನ ಕ್ರಮಕ್ಕೈಗೊಳ್ಳಲಾಗುವುದುದೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

16/12/2019
ಕುಲಸಚಿವರು(ಪ್ರ)
ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕ, ಕೋಲಾರ-563 103

**ಗೆ,**

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲಾ ಬಿಎಡ್ ಕಾಲೇಜುಗಳ ಪ್ರಾಂಶುಪಾಲರುಗಳು.

**ಪ್ರತಿಗಳು:**

1. ಪ್ರಾಂತೀಯ ನಿರ್ದೇಶಕರು, NCTE, G-7, Sector-10, ದ್ವಾರಕ, ನವದೆಹಲಿ-110075.
2. ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
3. ಉಪಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-560 001.
4. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ-563 103.
5. ಕಛೇರಿ ಪ್ರತಿ.